**<u>ದಿನಾಂಕಃ 11-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ಮತ್ತು 2 ನೇ ವಾದಿಯರ ಪರ ಶ್ರೀ ಎಸ್.ಎಸ್.ಕೆ. ವಕೀಲರಿಂದಃ</u>**

ನಾನು ಬ್ಯಾಡಗಿ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾನು ಅದನ್ನು ಬಿಟ್ಟು ಬೇರೆ ಯಾವ ಕೆಲಸ ಮಾಡುವುದಿಲ್ಲ. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

02. ನನ್ನ ತಂದೆಯ ಪೂರ್ತಿ ಹೆಸರು ಪಾಂಡುರಂಗಪ್ಪ ಖಂಡಪ್ಪ ಮುದ್ದಣ್ಣನವರ. ಖಂಡಪ್ಪ ಮುದ್ದಣ್ಣನವರ ನನ್ನ ತಂದೆಯ ಜನಕ ತಂದೆ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನನ್ನ ತಂದೆಯ ದತ್ತಕ ತಂದೆ ಎನ್ನುತ್ತಾರೆ. ಸದರಿ ಖಂಡಪ್ಪರವರು ನನ್ನ ತಂದೆಯನ್ನು ಯಾವ ವರ್ಷದಲ್ಲಿ ದತ್ತು ಪಡೆದರು ಎಂದು ಗೊತ್ತಿಲ್ಲ. ಸದರಿ ದತ್ತು ಪಡೆದ ಬಗ್ಗೆ ದಾಖಲೆ ಆಗಿದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಖಂಡಪ್ಪ ಮುದ್ದಣ್ಣನವರ ರವರಿಗೆ ಯಾವುದೇ ಸಂತಾನ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯ ಜನಕ ತಂದೆಯ ಹೆಸರು ಚಂದ್ರಪ್ಪಶೇಖರಪ್ಪ ಮುದ್ದಣ್ಣನವರ. ದಾವಾ ಆಸ್ತಿಗಳು ಮುದ್ದಣ್ಣನವರ ಮನೆತನಕ್ಕೆ ಸಂಬಂಧಿಸಿವೆ. ದಾವಾ ಸ್ವತ್ತುಗಳು ಖಂಡಪ್ಪ ಮುದ್ದಣ್ಣನವರ ಘರಾಣೆಕ್ಕೆ ಸಂಬಂಧಿಸಿದ ಆಸ್ತಿಗಳಾಗಿವೆ. ದಾವಾ ಆಸ್ತಿಗಳು ಎಷ್ಟು ಇವೆ ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತುಗಳ ಪೈಕಿ ಎಷ್ಟು ಆಸ್ತಿಗಳು ಖಂಡಪ್ಪ ಮುದ್ದಣ್ಣನವರ ರವರದ್ದು ಇವೆ ಹಾಗೂ ಎಷ್ಟು ಆಸ್ತಿಗಳು ಖಂಡಪ್ಪ ಮುದ್ದಣ್ಣನವರ ರವರದ್ದು ಅಲ್ಲ ಎಂದರೆ ಸಾಕ್ಷಿ ಖಂಡಪ್ಪ ಮುದ್ದಣ್ಣನವರ ರವರ ಆಸ್ತಿಗಳನ್ನು 1 ನೇಪ್ರತಿವಾದಿ ಮಾರಾಟ ಮಾಡಿ ಶಾಲೆ ಕಲಿತಿರುತ್ತಾರೆ ಎನ್ನುತ್ತಾರೆ.

03. ಖಂಡಪ್ಪನ ಆಸ್ತಿಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿ ಶಾಲೆ ಕಲಿತಿರುವ ಬಗ್ಗೆ ನನ್ನಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರತಿವಾದ ಪತ್ರದಲ್ಲಿ

ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನನ್ನ ಪ್ರತಿವಾದ ಪತ್ರದಲ್ಲಿ ಖಂಡಪ್ಪನ ಆಸ್ತಿಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿ ಶಾಲೆ ಕಲಿತಿರುವ ಬಗ್ಗೆ ಬರೆಯಿಸಿರುತ್ತೇನೆ. ನಾನು ಆ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ಪ್ರತಿವಾದ ಪತ್ರದಲ್ಲಿ ಆ ಬಗ್ಗೆ ನಾನು ಬರೆಯಿಸಿದೇ ಇದ್ದರೂ ಸಹ ಬರೆಯಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

04. ಸದರಿ ಖಂಡೆಪ್ಪ ರವರಿಗೆ ಸಂಬಂಧಸಿದ ಆಸ್ತಿ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾ ಸ್ವತ್ತುಗಳಲ್ಲಿ ಇರುವ ಆಸ್ತಿಗಳಲ್ಲಿ ಒಂದೂ ಆಸ್ತಿಯೂ ಖಂಡೆಪ್ಪರವರಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ.

05. ಈ ದಾವೆಯನ್ನು ಯಾರು ಯಾವ ಕಾರಣಕ್ಕಾಗಿ ಏನು ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಮ್ಮ ಮನೆತನದ ಸದಸ್ಯರ ಹೆಸರುಗಳ ಬಗ್ಗೆ ನನಗೆ ಮಾಹಿತಿ ಇದೆ. ಚಂದ್ರುಪ್ಪಶೇಖರಪ್ಪ ಮುದ್ದಣ್ಣನವರು ನನ್ನ ತಂದೆಯ ಹಾಗೂ 1 ನೇಪ್ರತಿವಾದಿಯ ಜನಕ ತಂದೆ ಎಂದರೆ ಸರಿ. ಸದರಿ ಚಂದ್ರುಪ್ಪಶೇಖರಪ್ಪ ಮುದ್ದಣ್ಣನವರ ರವರಿಗೆ ಅಶೋಕ ಎಂಬ ಮಗ ಸಹ ಇದ್ದರು ಎಂದರೆ ಸರಿ. ಅದೇರೀತಿ ಚಂದ್ರುಪ್ಪಶೇಖರಪ್ಪ ಮುದ್ದಣ್ಣನವರು ರವರಿಗೆ ನಿರ್ಮಲಾದೇವಿ, ಶಾಂತಾ ಮತ್ತು ಸಂಕಮ್ಮ ಎಂಬ 3 ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ. ಸದರಿ ಚಂದ್ರುಪ್ಪಶೇಖರಪ್ಪ ಮುದ್ದಣ್ಣನವರ ರವರ ಗಂಡು ಮಕ್ಕಳ ಪೈಕಿ ಸಂಕಪ್ಪ ಮತ್ತು ನನ್ನ ತಂದೆ ಪಾಂಡುರಂಗರವರು ಬೇರೆ ಮನೆತನಕ್ಕೆ ದತ್ತಕ ಹೋಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಸಂಕಪ್ಪರವರು ಗುಡ್ಡಪ್ಪ ಮುದ್ದಣ್ಣನವರಿಗೆ ದತ್ತು ಹೋಗಿರುತ್ತಾರೆ ಎಂದರೆ ಸರಿ. ಅದೇರೀತಿ ನನ್ನ ತಂದೆ ಖಂಡೆಪ್ಪ ಮುದ್ದಣ್ಣನವರ ರವರಿಗೆ ದತ್ತು ಹೋಗಿರುತ್ತಾರೆ ಎಂದರೆ ಸರಿ.

06. ಚಂದ್ರುಪ್ಪಶೇಖರಪ್ಪ ಮುದ್ದಣ್ಣನವರ ರವರಿಗೆ ಗುಡ್ಡಪ್ಪ ಮತ್ತು ಖಂಡೆಪ್ಪ ರವರು ದೊಡ್ಡಪ್ಪರಾಗಬೇಕು ಅಂದರೆ ಚಂದ್ರುಶೇಖರಪ್ಪರವರ ತಂದೆಯ ಸಹೋದರರಾಗಬೇಕು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಜನಕ ತಂದೆ ಹಾಗೂ ದತ್ತಕ ತಂದೆಯ ಮದ್ಯೆ ಯಾವ ಸಂಬಂಧ ಇತ್ತು ಎಂದು ನಾನು ತಿಳಿದುಕೊಳ್ಳಲು

ಪ್ರಯತ್ನಿಸಿಲ್ಲ. ಸದರಿ ಸಂಬಂಧದ ಬಗ್ಗೆ ನನ್ನ ತಾಯಿಗೆ ಗೊತ್ತಿದೆ. ನನ್ನ ತಾಯಿ ಇದೆ ಊರಿನಲ್ಲಿ ಇದ್ದಾರೆ. ಸದರಿಯವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

07. 1 ನೇ ಪ್ರತಿವಾದಿ ಗುಡ್ಡಪ್ಪ ಮುದ್ದಣ್ಣನವರ ಮನೆತನಕ್ಕೆ ದತ್ತು ಹೋಗುವ ಸಮಯದಲ್ಲಿ ಸದರಿ ಗುಡ್ಡಪ್ಪ ಜೀವಂತ ಇರಲಿಲ್ಲ ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗುಡ್ಡಪ್ಪರವರ ಹೆಂಡತಿ ಹೆಸರು ಪಾರ್ವತ್ತೇವ್ವ ಎಂದರೆ ಸರಿ. ಸದರಿ ಪಾರ್ವತ್ತೇವ್ವ ರವರು 1 ನೇ ಪ್ರತಿವಾದಿಯನ್ನು ದತ್ತು ಪಡೆದು ದತ್ತು ಪತ್ರವನ್ನು ನೊಂದಾಯಿಸಿರುತ್ತಾರೆ ಎಂದರೆ ಸರಿ. ಸದರಿ ನನ್ನ ತಂದೆಯ ದತ್ತು ಹೋಗುವ ಸಮಯ ಹಾಗೂ 1 ನೇ ಪ್ರತಿವಾದಿ ದತ್ತು ಹೋಗುವ ಸಮಯದ ಮದ್ಯೆದಲ್ಲಿ ಎಷ್ಟು ಅಂತರ ಇತ್ತು ಎಂದರೆ ಸಾಕ್ಷಿ ಒಂದೇ ದಿನ ಇಬ್ಬರೂ ಸಹ ದತ್ತು ಹೋಗಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಯ ದತ್ತು ಪತ್ರವನ್ನು ನಾನು ನೋಡಿಲ್ಲ. ಸಾಕ್ಷಿ ಮುಂದುವರದು ಸದರಿ ದತ್ತು ಪತ್ರ 1 ನೇ ಪ್ರತಿವಾದಿಯ ಬಳಿ ಇದ್ದು ಅವರು ನನಗೆ ನೀಡಿಲ್ಲ ಎನ್ನುತ್ತಾರೆ. ನನ್ನ ತಂದೆಯ ದತ್ತುಪತ್ರ 1 ನೇಪ್ರತಿವಾದಿಯ ಬಳಿ ಇದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮೊದಲು ಕೂಡಿ ಇದ್ದಾಗ ಎಲ್ಲ ದಾಖಲೆಗಳು 1 ನೇಪ್ರತಿವಾದಿಯ ಬಳಿ ಇರುತ್ತಿದ್ದವು ಎನ್ನುತ್ತಾರೆ.

08. ನಾವು ಹಾಗೂ 1 ನೇಪ್ರತಿವಾದಿ 1978 ಕ್ಕಿಂತ ಮುಂಚೆ ಕೂಡಿ ಇದ್ದೆವು. ನಾನು ಸಂಕಪ್ಪರವರ ಮನೆಯಲ್ಲಿದ್ದೆ ಎಂದರೆ ಸಾಕ್ಷಿ ನಾವು ಹಾಗೂ 1 ನೇಪ್ರತಿವಾದಿ ಒಂದೇ ಮನೆಯಲ್ಲಿ ಕೂಡಿ ವಾಸವಾಗಿದ್ದೆವು ಎನ್ನುತ್ತಾರೆ. ಸದರಿ ಮನೆಯಲ್ಲಿ ಇವತ್ತಿಗೂ ಸಹ 1 ನೇ ಪ್ರತಿವಾದಿ ಸಂಕಪ್ಪರವರು ವಾಸವಾಗಿದ್ದಾರೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿಯೊಂದಿಗೆ ಆತನ ಮಕ್ಕಳು ವಾಸವಾಗಿದ್ದಾರೆ ಎಂದರೆ ಸರಿ.

09. ಗುಡ್ಡಪ್ಪ ಮುದ್ದಣ್ಣನವರ ಆಸ್ತಿಗಳಿಗೆ ನಾವು ಯಾವುದೇ ರೀತಿಯಿಂದ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಗುಡ್ಡಪ್ಪರವರು ತೀರಿಕೊಂಡ ನಂತರ ಅವರಿಗೆ ಅವರ ಹೆಂಡತಿ ಪಾರ್ವತ್ತೇವ್ವ ರವರು ಏಕಮಾತ್ರ ವಾರಸುದಾರರ ಇದ್ದರು ಎಂದರೆ ಸರಿ. ಸದರಿ ಪಾರ್ವತಿಯವರು 1 ನೇ ಪ್ರತಿವಾದಿಯನು ದತ್ತು ಪಡೆದು ತಮ್ಮ ಆಸ್ತಿಗಳನ್ನು 1 ನೇ

ಪ್ರತಿವಾದಿಗೆ ನೀಡಿದರು ಎಂದರೆ ಸರಿ. ದಾವಾ ಆಸ್ತಿಗಳು ಪಾರ್ವತೆವ್ವರವರ ಆಸ್ತಿಗಳು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.